ತೆರವುಗೊಳಿಸಿ, ಕೆರೆ ಅಂಗಳದ ಗಡಿ ಭಾಗದಲ್ಲಿ ಬೌಂಡರಿ ಟ್ರೆಂಚ್‌ಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಕಾಮಗಾರಿಗಳು ನಿಧಾನಗತಿಯಲ್ಲಿ ಜರುಗುತ್ತಿರುವುದು

552 (607) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಮಂಜೂರಾಗಿವೆ; ಈ ಕಾಮಗಾರಿಗಳಿಗೆ ಮಂಜೂರಾದ ಅನುದಾನದ ವಿವರಗಳೊಂದಿಗೆ, ಕಾಮಗಾರಿ ಪ್ರಾರಂಭದ ಹಾಗೂ ಮುಗಿಯುವ ದಿನಾಂಕದ ವಿವರ ನೀಡುವುದು;

ಆ) ಈ ಮಂಜೂರಾದ ಕಾಮಗಾರಿಗಳು ತುಂಬಾ ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪ್ರಸಕ್ತ ಸಾಲಿನಲ್ಲಾದರು ಈ ಕಾಮಗಾರಿಯ ಕಾರ್ಯಗಳು ಅತ್ಯಂತ ವೇಗದಲ್ಲಿ ಜರುಗಲು ಅನುದಾನ ನೀಡಿ ಪೂರ್ಣಗೊಳಿಸುವುದೆ?

ಶ್ರೀ ಬಸವರಾಜು ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಬೀದರ್ ಜಿಲ್ಲೆಯ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ಕೈಗೊಂಡಿರುವ ಕಾಮಗಾರಿಗಳ ವಿವರ, ಕಾಮಗಾರಿಗೆ ಮಂಜೂರಾದ ವಿವರ, ಕಾಮಗಾರಿ ಪ್ರಾರಂಭವಾದ ವಿವರ ಹಾಗೂ ಮುಗಿಯುವ ದಿನಾಂಕದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಸರಣಿ ಬ್ಯಾರೇಜುಗಳ ಪೈಕಿ ಚಂದಾಪುರ ಹಾಗೂ ಮಾಣಿಕೇಶ್ವರ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನುಳಿದಂತೆ ಜೀರಗಿಹಾಳ್ ಹಾಗೂ ಜಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳ ಸಿವಿಲ್ ಹಾಗೂ ಗೇಟ್ ಅಳವಡಿಕೆ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದ್ದು, ಬಾಕಿ ಕಾಮಗಾರಿಗಳ ಪೂರ್ಣಗೊಳಿಸುವಿಕೆಗೆ ಅಗತ್ಯ ಅನುದಾನ ನೀಡುವುದರೊಂದಿಗೆ ಪ್ರಸಕ್ತ ಸಾಲಿನಲ್ಲಿಯೇ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಕಾರಂಜಾ ಯೋಜನೆಯಡಿ ಬಾಕಿ ಎಲ್ಲಾ ಕಾಮಗಾರಿಗಳಿಗೆ ಇತ್ತೀಚೆಗೆ ಟೆಂಡರ್ ಮೂಲಕ ವಹಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಎಐಬಿಪಿ ರಡಿ ಕೇಂದ್ರ ಸಹಾಯಧನ ಪಡೆದುಕೊಂಡು ಮಾರ್ಚ್–2013ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಅನುಬಂಧ – 1

ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಬ್ಯಾರೇಜುಗಳ ವಿವರಗಳು

ಕ್ರ. ಸಂ.	ಕಾಮಗಾರಿಯ ವಿವರ	ಪ್ರಾರಂಭಗೊಂಡ ವರ್ಷ	ಕಾಮಗಾರಿ ಮೊತ್ತ	ಪೂರ್ಣಗೊಳ್ಳುವ ಅವಧಿ
1	ಚಂದಾಪುರ ಬ್ರಿಡ್ಜ್–ಕಂ–ಬ್ಯಾರೇಜ್	ನವೆಂಬರ್ 2005	6015.76	ಕಾಮಗಾರಿ ಪೂರ್ಣಗೊಂಡಿದೆ.
2	ಜೀರಗಿಹಾಳ ಬ್ರಿಡ್ಜ್–ಕಂ–ಬ್ಯಾರೇಜ್	ನವೆಂಬರ್ 2005	5785.74	ಬ್ಯಾರೇಜಿನ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಗೇಟ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು, ಪ್ರಸಕ್ತ 2012–13ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
3	ಮಾಣಿಕೇಶ್ವರ ಬ್ರಿಡ್ಜ್–ಕಂ–ಬ್ಯಾರೇಜ್	ನವೆಂಬರ್ 2005	5250.62	ಕಾಮಗಾರಿ ಪೂರ್ಣಗೊಂಡಿದೆ.
4	ಹಾಲಹಳ್ಳಿ ಬ್ರಿಡ್ಜ್–ಕಂ–ಬ್ಯಾರೇಜ್	ನವೆಂಬರ್ 2005	8583.37	ಬ್ಯಾರೇಜಿನ ಸಿವಿಲ್ ಕಾಮಗಾರಿಯು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಗೇಟುಗಳ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟಾರೆ ಬ್ಯಾರೇಜಿನ ಬಾಕಿ ಕಾಮಗಾರಿಗಳು ಪ್ರಸಕ್ತ 2012–13ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಅನುಬಂಧ-2

ಕಾರಂಜಾ ಯೋಜನೆ, ಚುಳಕಿನಾಲಾ ಯೋಜನೆ ಮಲ್ಲಾಮಾರಿ ಮೇಲ್ದಂಡೆ ಯೋಜನೆಗಳ
2012-13 ನೇ ಸಾಲಿನ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿದೆ.

ಕ್ರ. ಸಂ	ಕಾಮಗಾರಿಗಳ ಸಂಖ್ಯೆ/ ಪ್ಯಾಕೇಜ್ ಸಂಖ್ಯೆ	ಲೆಕ್ಕ ಶೀರ್ಷಿಕೆ	ಒದಗಿಸಿದ ಅನುದಾನ (ಲಕ್ಷಗಳಲ್ಲಿ) / ಅಂದಾಜು ಮೊತ್ತ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಕಾಮಗಾರಿ ಪ್ರಾರಂಭದ ದಿನಾಂಕ	ಕಾಮಗಾರಿ ಮುಕ್ತಾಯ ಗೊಳ್ಳಬಹುದಾದ ದಿನಾಂಕ	ಷರಾ
1	4700 ಎ.ಐ.ಬಿ.ಪಿ.						
ಎ	6	ಕಾರಂಜಾ ಕಾಲುವೆ ನಿರಾಪರಿ ಯೋಜನೆ	628.837	6	ಜನವರಿ 2011	31/03/2013	ಎ.ಐ.ಬಿ.ಪಿ. ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಾಕಿ ಬಿಡುಗಡೆಗೊಳಿಸಿಕೊಳ್ಳಬೇಕಾಗಿರುತ್ತದೆ.
ಬಿ	19	ಕಾರಂಜಾ ಪತ ನಿರಾಪರಿ	1871.71	19	ಫೆಬ್ರವರಿ 2011	31-03-2013	
ಸಿ	8	4700 ಸಾಸ್ ಎ.ಐ.ಬಿ.ಪಿ.	2298.94	8	ಜೂನ್ 2011	31-03-2013	
		4700					ಕಾರ್ಯಕ್ರಮ ಪಟ್ಟಿಗೆ
2	114	ಎಸ್‌ಸಿಪಿ ಮತ್ತು ಟಿಎಸ್‌ಪಿ	562.00	114.00		31-03-2013	ಅನುಮೋದನೆ ನೀಡಲಾಗಿದ್ದು, ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
3	12	2700 ಸಾಸ್ ಎ.ಐ.ಬಿ.ಪಿ.	34.78 + 10.02 = 44.80			31-03-2013	ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
4	39		94.75			31-03-2013	ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಐ. ಡಿ. [illegible]
ವಿಶೇಷ ಕಾರ್ಯನಿರ್ವಹಣಾಧಿಕಾರಿ
(ಕಾಮಗಾರಿ)
ಜಲ ಸಂಪನ್ಮೂಲ [illegible]

ಚುಳಕಿನಾಲಾ ಯೋಜನೆ – ಚುಳಕಿನಾಲಾ ಯೋಜನೆ ಮಧ್ಯಮ ನೀರಾವರಿ ಯೋಜನೆಯಾಗಿದ್ದು, ಈ ಯೋಜನೆಯ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿಗಳ ಸಂಖ್ಯೆ	ಲೆಕ್ಕ ಶೀರ್ಷಿಕೆ	ಒದಗಿಸಿದ ಅನುದಾನ (ಲಕ್ಷಗಳಲ್ಲಿ)	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಕಾಮಗಾರಿ ಪ್ರಾರಂಭದ ದಿನಾಂಕ	ಕಾಮಗಾರಿ ಮುಗಿಯುವ ದಿನಾಂಕ	ಷರಾ
1	08	4700 ಎಸ್.ಸಿ.ಪಿ ಮತ್ತು ಟಿ.ಎಸ್.ಪಿ	8+3=11.00	08		31-03-2013	ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಿದೆ. ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
2	07	2700 ಇತರೆ ಪ್ರದೇಶ	6.67	07		31-03-2013	ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಿದೆ.. ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಲ್ಲಾಮಾರಿ ಮೇಲ್ದಂಡೆ ಯೋಜನೆ – ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಮಧ್ಯಮ ನೀರಾವರಿ ಯೋಜನೆಯಾಗಿದ್ದು, ಈ ಯೋಜನೆಯ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿಗಳ ಸಂಖ್ಯೆ	ಲೆಕ್ಕ ಶೀರ್ಷಿಕೆ	ಒದಗಿಸಿದ ಅನುದಾನ (ಲಕ್ಷಗಳಲ್ಲಿ)	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಕಾಮಗಾರಿ ಪ್ರಾರಂಭದ ದಿನಾಂಕ	ಕಾಮಗಾರಿ ಮುಗಿಯುವ ದಿನಾಂಕ	ಷರಾ
1	14	2701 ಇತರೆ ಪ್ರದೇಶ	14.81	9		31-03-2013	ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಿದೆ. ಅಂದಾಜು ಪಟ್ಟಿ ತಯಾರಿಸುವ ಹಾಗೂ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
2	04	4700 ಇತರೆ. ಎಂ.	678.50	04	ನವೆಂಬರ್ 2011	31-03-2013	2011-12ನೇ ಸಾಲಿನಲ್ಲಿ ಕಾಮಗಾರಿಗಳನ್ನು ಕೇಂದ್ರ ಧನ ಸಹಾಯದಿಂದ ಕೈಗೆತ್ತಿಕೊಳ್ಳಲಾಗಿದ್ದು, ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗದೆ, 2012-13ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ಐ. ಡಿ. ಖಾನಾಪುರ
ವಿಶೇಷ ಕರ್ತವ್ಯಾಧಿಕಾರಿ,
(ಕೆಬಿಜೆಎನ್ಎಲ್)
ಜಲ ಸಂಪನ್ಮೂಲ ಇಲಾಖೆ